# ಸಶಸ್ತ್ರ ಪೊಲೀಸ್ ಪೇದೆ ನೇಮಕಾತಿ–2012

## (KSRP-Question Paper-2012)

ಅವಧಿ : 2 ಗಂಟೆ　　　　　　　　　　　　　　　　ಅಂಕಗಳು : 100

**1. ಕೆಳಗಿನ ಕ್ರೀಡೆಗಳಲ್ಲಿ ಯಾವುದರಲ್ಲಿ ಮೇರಿ ಕೋಮ್ ತನ್ನ ಅಸಾಧಾರಣ ಸಾಧನೆಗೆ ಪ್ರಖ್ಯಾತರಾಗಿದ್ದಾರೆ?**

ಎ. ಬಾಕ್ಸಿಂಗ್　　ಬಿ. ಶೂಟಿಂಗ್

ಸಿ. ಈಜುಗಾರಿಕೆ　　ಡಿ. ಬಿಲ್ವಿದ್ಯೆ

**2. ಭಾರತದ ರಾಷ್ಟ್ರ ಧ್ವಜದ ಉದ್ದ ಮತ್ತು ಅಗಲಗಳ ಅನುಪಾತ ಯಾವುದು?**

ಎ. 5 : 3　　ಬಿ. 3 : 2

ಸಿ. 3 : 4　　ಡಿ. 2 : 1

**3. ಕೆಳಗಿನ ರಾಜ್ಯಗಳಲ್ಲಿ ಯಾವುದರ ಅಧಿಕೃತ ಭಾಷೆ ಇಂಗ್ಲಿಷ್ ಆಗಿದೆ?**

ಎ. ಮಣಿಪುರ　　ಬಿ. ನಾಗಾಲ್ಯಾಂಡ್

ಸಿ. ಕರ್ನಾಟಕ　　ಡಿ. ಆಂಧ್ರಪ್ರದೇಶ

**4. ಭಾರತದಲ್ಲಿ ಅತಿ ದೊಡ್ಡ ಸಾರ್ವತ್ರಿಕ ರಂಗದ ಬ್ಯಾಂಕ್ ಯಾವುದು?**

ಎ. ಸೆಂಟ್ರಲ್ ಬ್ಯಾಂಕ್

ಬಿ. ಭಾರತೀಯ ಸ್ಟೇಟ್ ಬ್ಯಾಂಕ್

ಸಿ. ಪಂಜಾಬ್ ನ್ಯಾಷನಲ್ ಬ್ಯಾಂಕ್

ಡಿ. ಇಂಡಿಯನ್ ಓವರ್ ಸೀಸ್ ಬ್ಯಾಂಕ್

**5. ಯುನಿಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯಾ–ಇದರ ಚೇರ್ ಪರ್ಸನ್ (ಅಧ್ಯಕ್ಷ) ಆಗಿ ಯಾರನ್ನು ನೇಮಕ ಮಾಡಲಾಗಿದೆ?**

ಎ. ನಂದನ್ ನೀಲೆಕಣಿ

ಬಿ. ಅಜೀಂ ಪ್ರೇಮ್ ಜೀ

ಸಿ. ಆನಂದ್ ಮಹೀಂದ್ರ

ಡಿ. ಫರ್ನ್ಲಾ ಪಂಡಿತ್

**6. ಭಾರತದ ಸಂವಿಧಾನದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಎಲ್ಲಿಂದ ಎರವಲು ಪಡೆಯಲಾಗಿದೆ?**

ಎ. ಕೆನಡ

ಬಿ. ಯುನೈಟೆಡ್ ಕಿಂಗ್‌ಡಮ್

ಸಿ. ಯು. ಎಸ್. ಎ.

ಡಿ. ಐರ್ಲೆಂಡ್

**7. ಮಂತ್ರಿ ಮಂಡಲ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೆ?**

ಎ. ಮುಖ್ಯಮಂತ್ರಿ

ಬಿ. ರಾಜ್ಯಪಾಲ

ಸಿ. ಮುಖ್ಯ ಕಾರ್ಯದರ್ಶಿ

ಡಿ. ವಿಧಾನ ಸಭೆಯ ಸ್ಪೀಕರ್

**8. ಎಷ್ಟು ವರ್ಷ ವಯಸ್ಸಾಗುವ ತನಕ ಸರ್ವೋಚ್ಚನ್ಯಾಯಾಲಯದ ನ್ಯಾಯಾಧೀಶರು ಹುದ್ದೆ ಹೊಂದಿರುತ್ತಾರೆ?**

ಎ. 62 ವರ್ಷ　　ಬಿ. 65ವರ್ಷ

ಸಿ. 70 ವರ್ಷ　　ಡಿ. 60ವರ್ಷ

**9. ಪೂರ್ಣವಾಗಿ ಭಾರತದ ಸಂವಿಧಾನ ಎಂದು ಜಾರಿಗೆ ಬಂತು?**

ಎ. 26 ಜನವರಿ, 1950

ಬಿ. 15 ಆಗಸ್ಟ್, 1947

ಸಿ. 15 ಆಗಸ್ಟ್, 1948

ಡಿ. 26 ಜನವರಿ, 1947

**10. ಭಾರತದ ರಾಷ್ಟ್ರಪತಿಯಾಗಲು ಅಗತ್ಯವಿರುವ ಕನಿಷ್ಠ ವಯಸ್ಸು ಎಷ್ಟು?**

ಎ. 18 ವರ್ಷ　　ಬಿ. 21 ವರ್ಷ

ಸಿ. 25 ವರ್ಷ　　ಡಿ. 35 ವರ್ಷ

**11. ಭಾರತದ ಸಂವಿಧಾನದಲ್ಲಿ ನಮೂದಿಸಲಾದ ಮೂಲಭೂತ ಹಕ್ಕುಗಳ ಸಂರಕ್ಷಕರು ಯಾರು?**

ಎ. ಸರ್ವೋಚ್ಚನ್ಯಾಯಾಲಯ

ಬಿ. ಪ್ರಧಾನ ಮಂತ್ರಿ

ಸಿ. ಪೋಲೀಸ್

ಡಿ. ಭಾರತದ ರಾಷ್ಟ್ರಪತಿ

12. **ಭಾರತದ ಸಂವಿಧಾನದಲ್ಲಿ ಈಗ ಎಷ್ಟು ಮೂಲಭೂತ ಕರ್ತವ್ಯಗಳಿವೆ?**

ಎ. ಹನ್ನೊಂದು ಬಿ. ಒಂಬತ್ತು

ಸಿ. ಹತ್ತು ಡಿ. ಹನ್ನೆರಡು

13. **ಪಂಚಾಯತ್ ರಾಜ್ಯ ಮೂರು ಹಂತದ ಪದ್ಧತಿಯ ಅತ್ಯಂತ ಮೇಲ್ದರ್ಜೆಯಲ್ಲಿರುವ ಸಂಸ್ಥೆಯಾವುದು?**

ಎ. ಗ್ರಾಮಸಭಾ ಬಿ. ಗ್ರಾಮ ಪಂಚಾಯತ್

ಸಿ. ಜಿಲ್ಲಾ ಪರಿಷತ್ ಡಿ. ಪಂಚಾಯತ್

14. **ಲಿಗ್ನೈಟ್ ಕೆಳಗಿನ ಯಾವ ಒಂದರ ರೂಪವಾಗಿದೆ?**

ಎ. ಕಬ್ಬಿಣ ಬಿ. ತಾಮ್ರ

ಸಿ. ಅಲ್ಯುಮಿನಿಯಂ ಡಿ. ಕಲ್ಲಿದ್ದಲು

15. **ಮಾನವ ದೇಹದಲ್ಲಿ ರಕ್ತದಲ್ಲಿನ ಹಿಮೊಗ್ಲೋಬಿನ್ ಮೂಲತಃ ಕೆಳಗಿನ ಯಾವುದನ್ನು ನೆರವೇರಿಸುತ್ತದೆ?**

ಎ. ಕಾರ್ಬನ್ ಡೈ ಆಕ್ಸೈಡ್ನ ರವಾನೆ

ಬಿ. ಕಬ್ಬಿಣದ ಬಳಸುವಿಕೆ

ಸಿ. ರಕ್ತಹೀನತೆಯ ತಡೆಗಟ್ಟುವಿಕೆ

ಡಿ. ಆಮ್ಲಜನಕದ ರವಾನೆ

16. **ಕನ್ನಡ ಸಾಹಿತ್ಯದಲ್ಲಿ ಕೆಳಗಿನವರಲ್ಲಿ ಯಾರನ್ನು ರಾಷ್ಟ್ರಕವಿ ಎಂದು ಗೌರವಿಸಲಾಗಿದೆ?**

ಎ. ಪಂಜೆ ಮಂಗೇಶರಾಯರು

ಬಿ. ಗೋವಿಂದಪೈ

ಸಿ. ಅಂಬಿಕಾತನಯ ದತ್ತ

ಡಿ. ವಿನಾಯಕ ಕೃಷ್ಣ ಗೋಕಾಕ್

17. **ಇಷ್ಟರವರೆಗೆ ಕನ್ನಡ ಸಾಹಿತ್ಯಕ್ಕೆ ಎಷ್ಟು ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಗಿದೆ?**

ಎ. 6 ಬಿ. 7 ಸಿ. 8 ಡಿ.9

18. **ಕರ್ನಾಟಕದ ಏಕೀಕರಣ ಎಂದು ಆಯಿತು?**

ಎ. ನವೆಂಬರ್ 1, 1956

ಬಿ. ಜನವರಿ 26, 1950

ಸಿ. ಆಗಸ್ಟ್ 15, 1947

ಡಿ. ನವೆಂಬರ್ 1, 1973

19. **ಮಂಡಗದ್ದೆ ಪಕ್ಷಿಧಾಮ ಯಾವ ಜಿಲ್ಲೆಯಲ್ಲಿದೆ?**

ಎ. ಶಿವಮೊಗ್ಗ ಬಿ. ಬಳ್ಳಾರಿ

ಸಿ. ಬೆಳಗಾಂ ಡಿ. ಮಂಡ್ಯ

20. **ತನ್ನ ಸಾಹಿತ್ಯ ಕೃತಿಗಳಲ್ಲಿ ಯಾರು "ಆನಂದ ಕಂದ" ಎಂಬ ಕಾವ್ಯ ನಾಮ ಉಪಯೋಗಿಸಿದ್ದಾರೆ?**

ಎ. ಸುಬ್ರಹ್ಮಣ್ಯ ರಾಜೆ ಅರಸ್

ಬಿ. ಬಿ.ಎಂ. ಶಂಕರ್

ಸಿ. ಸಿದ್ದಯ್ಯ ಪುರಾಣಿಕ

ಡಿ. ಬೆಟಗೇರಿ ಕೃಷ್ಣಶರ್ಮ

21. **ಋತುಗಳು ಯಾವುದರಿಂದ ಉಂಟಾಗುತ್ತದೆ?**

ಎ. ತನ್ನ ಅಕ್ಷದ ಸುತ್ತ ಭೂಮಿ ತಿರುಗುವುದರಿಂದ

ಬಿ. ಸೂರ್ಯನ ಸುತ್ತಭೂಮಿಯ ಪರಿಭ್ರಮಣ

ಸಿ. ತನ್ನ ಅಕ್ಷದ ಮೇಲೆ ಭೂಮಿಯ ವಾಲುವಿಕೆ

ಡಿ. ಚಂದ್ರನ ತಿರುಗುವಿಕೆ ಮತ್ತು ಪರಿಭ್ರಮಣ

22. **ಕೆಳಗಿನವುಗಳಲ್ಲಿ ಯಾವುದು ಸ್ವಾಭಾವಿಕ ಬಂದರು ಅಲ್ಲ?**

ಎ. ಮುಂಬಯಿ ಬಿ. ಮಂಗಳೂರು

ಸಿ. ಕಾಂಡ್ಲ ಡಿ. ವಿಶಾಖಪಟ್ಟಣಂ

23. **ಕೇಪ್ ಆಫ್ ಗುಡ್ ಹೋಪ್ ಎಲ್ಲಿದೆ?**

ಎ. ಆಫ್ರಿಕಾ ಬಿ. ದಕ್ಷಿಣ ಆಫ್ರಿಕಾ

ಸಿ. ಆಸ್ಟ್ರೇಲಿಯಾ ಡಿ. ಇವಲ್ಲಿ ಯಾವುದೂ ಅಲ್ಲ

24. **ಕೆಳಗಿನವುಗಳಲ್ಲಿ ಯಾವುದು ಏಕದಳ ಧಾನ್ಯ ಅಲ್ಲ?**

ಎ. ಮುಸುಕಿನ ಜೋಳ ಬಿ. ಬೇಳೆಕಾಳು

ಸಿ. ಗೋಧಿ ಡಿ. ಅಕ್ಕಿ

25. **2011ರ 17ನೇ ಸಾರ್ಕ್ ಶೃಂಗಸಭೆ ಎಲ್ಲಿ ನಡೆಯಿತು?**

ಎ. ಬಾಂಗ್ಲಾದೇಶ ಬಿ. ಭಾರತ

ಸಿ. ಮಾಲ್ಡಿವ್ ಡಿ. ಪಾಕಿಸ್ತಾನ

26. **ಗಡಿನಾಡ ಗಾಂಧಿ ಎಂದು ಯಾರನ್ನು ಕರೆಯುತ್ತಾರೆ?**

ಎ. ಎಂ. ಕೆ. ಗಾಂಧಿ

ಬಿ. ಅಬ್ದುಲ್ ವಾಲಿ ಖಾನ್

ಸಿ. ಖಾನ್ ಅಬ್ದುಲ್ ಗಫಾರ್ ಖಾನ್

ಡಿ. ರಾಹುಲ್ ಗಾಂಧಿ

27. **ಗಾಂಧೀಜಿಯವರನ್ನು "ಮಹಾತ್ಮಾ" ಎಂದು ಯಾರು ಸಂಭೋಧಿಸಿದರು?**

ಎ. ರವೀಂದ್ರನಾಥ ಠಾಗೋರ್

ಬಿ. ಸುಭಾಶ್ ಚಂದ್ರ ಬೋಸ್

ಸಿ. ಜವಾಹರ್ ಲಾಲ್ ನೆಹರು

ಡಿ. ಸರ್ದಾರ್ ವಲ್ಲಭ ಬಾಯಿ ಪಟೇಲ್

**28. ಕೆಳಗಿನ ಯಾವ ಒಂದಕ್ಕೆ ಸಂಬಂಧಪಟ್ಟ "ಹೋಮ್ ರೂಲ್ ಲೀಗ್" ರಚಿಸಲಾಯಿತು?**

ಎ. ಬಂಗಾಳದ ವಿಭಜನೆ

ಬಿ. ಮೊದಲನೆ ಜಾಗತಿಕ ಯುದ್ಧ

ಸಿ. ಜಲಿಯನ್ ವಾಲಾ ಬಾಗ್ ಹತ್ಯಾಖಾಂಡದ ನಂತರದ ಹೋರಾಟ

ಡಿ. ಕ್ರಿ. ಶ. 1906ರ ಕಾಂಗ್ರೆಸ್ ಅಧಿವೇಶನ

**29. ಸ್ವತಂತ್ರ ಭಾರತದಲ್ಲಿ 'ಪೂರ್ಣಕ್ರಾಂತಿ'ಯ ಪರಿಕಲ್ಪನೆ ಕೊಟ್ಟವರು ಯಾರು?**

ಎ. ಜಯಪ್ರಕಾಶ್ ನಾರಾಯಣ್

ಬಿ. ಮಹಾತ್ಮಗಾಂಧಿ

ಸಿ. ಬಾಬಾ ರಾಮ್ ದೇವ್

ಡಿ. ಅಣ್ಣಾಹಜ್ಜಾರೆ

**30. ಗಾಂಧೀಜಿಯವರು ಚಂಪಾರಣ್ ಚಳುವಳಿಯನ್ನು ಯಾಕಾಗಿ ನಡೆಸಿದರು?**

ಎ. ಹರಿಜನರ ಹಕ್ಕುಗಳ ರಕ್ಷಣೆ

ಬಿ. ನಾಗರೀಕ ಶಾಸನ ಭಂಗ ಚಳುವಳಿ

ಸಿ. ಹಿಂದೂ ಸಮಾಜದ ಐಕ್ಯತೆಯನ್ನು ಉಳಿಸುವುದು

ಡಿ. ಇಂಡಿಗೊ ಕಾರ್ಮಿಕರ ಸಮಸ್ಯೆ ಬಗೆಹರಿಸುವುದು

**31. ಕೆಳಗಿನ ನದಿಗಳಲ್ಲಿ ಯಾವುದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ?**

ಎ. ನರ್ಮದಾ ಬಿ. ಕಾವೇರಿ

ಸಿ. ತಪತಿ ಡಿ. ಮಾಂಡೋವಿ

**32. ಕ್ಯೂಸೆಕ್‌ಗಳಲ್ಲಿ ಯಾವುದನ್ನು ಅಳೆಯುತ್ತಾರೆ?**

ಎ. ನೀರಿನ ಗುಣಮಟ್ಟ

ಬಿ. ನೀರಿನ ಆಳ

ಸಿ. ನೀರಿನ ಶುದ್ಧತೆ

ಡಿ. ನೀರಿನ ಪರಿಮಾಣ

**33. ಕೆಳಗಿನ ದೇಶಗಳಲ್ಲಿ ಯಾವುದರೊಂದಿಗೆ ಭಾರತ ಕ್ರಿಕೆಟ್ ಟೆಸ್ಟ್ ಆಡಿಲ್ಲ ?**

ಎ. ಇಂಗ್ಲೆಂಡ್ ಬಿ. ಬಾಂಗ್ಲಾದೇಶ

ಸಿ. ದಕ್ಷಿಣ ಆಫ್ರಿಕಾ ಡಿ. ಕೀನ್ಯಾ

**34. ಭಾರತದಲ್ಲಿ ಡ್ಯೂರಾಂಡ್ ಕಪ್ ಕೆಳಗಿನ ಯಾವ ಕ್ರೀಡೆ/ ಆಟದೊಂದಿಗೆ ಸಂಬಂಧ ಹೊಂದಿದೆ?**

ಎ. ಹಾಕಿ ಬಿ. ಫುಟ್ ಬಾಲ್

ಸಿ. ಬಾಸ್ಕೆಟ್ ಬಾಲ್ ಡಿ. ಬ್ಯಾಡ್ ಮಿಂಟನ್

**35. ಜಗತ್ತಿನಲ್ಲಿ ಅತ್ಯಂತ ದೊಡ್ಡ ಚಹ ಉತ್ಪಾದಕ ಯಾರು?**

ಎ. ಶ್ರೀಲಂಕಾ ಬಿ. ಬ್ರೆಸಿಲ್

ಸಿ. ಭಾರತ ಡಿ. ಚೀನ

**36. 320ಕಿ.ಮೀ.ನ ಒಂದು ಪ್ರಯಾಣದಲ್ಲಿ ಒಂದು ರೈಲು 240ಕಿ. ಮೀ.ನ್ನು 60ಕಿ.ಮೀ/ಗಂಟೆ ವೇಗದಲ್ಲಿ ಮತ್ತು ಉಳಿದುದನ್ನು 40 ಕಿ.ಮೀ.ಗ/ವೇಗದಲ್ಲಿ ಚಲಿಸುತ್ತದೆ ಇಡೀ ಪ್ರಯಾಣದಲ್ಲಿ ರೈಲಿನ ಸರಾಸರಿ ವೇಗ ಎಷ್ಟು?**

ಎ. 54ಕಿ.ಮೀ/ಗ ಬಿ. 64 ಕಿ.ಮೀ/ಗ

ಸಿ. 68 ಕಿ.ಮೀ/ಗ ಡಿ. 70 ಕಿ.ಮೀ/ಗ

**37. 12ಜನರೂ 2,400ನ್ನು 4 ದಿನಗಳಲ್ಲಿ ಸಂಪಾದಿಸ ಬಲ್ಲರು. ಎಷ್ಟು ಜನ ರೂ. 3,600ನ್ನು ದಿನಗಳಲ್ಲಿ ಸಂಪಾದಿಸಬಲ್ಲರು?**

ಎ. 12 ಬಿ. 15

ಸಿ. 18 ಡಿ. 17

**38. ಒಂದು ಚುನಾವಣೆಯ ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬನು ಒಟ್ಟು ಚಲಾಯಿಸಲ್ಪಟ್ಟ ಮತಗಳಲ್ಲಿ 40%ಗಳಿಸಿದ್ದು, 500 ಮತಗಳಿಂದ ಸೋತನು. ಚುನಾವಣೆಯಲ್ಲಿ ಚಲಾಯಿಸಲ್ಪಟ್ಟ ಒಟ್ಟು ಮತಗಳ ಸಂಖ್ಯೆ ಎಷ್ಟು?**

ಎ. 2400 ಬಿ. 2500

ಸಿ. 1600 ಡಿ. 2600

**39. 10 ವಸ್ತುಗಳ ಆಸಲು ಬೆಲೆಯು 9 ವಸ್ತುಗಳ ಮಾರಾಟ ಬೆಲೆಗೆ ಸಮವಾಗಿದ್ದರೆ 10 ವಸ್ತುಗಳನ್ನು ಮಾರುವುದರಿಂದ ಸಿಗುವ ಶೇಕಡ ಲಾಭ ಎಷ್ಟು?**

ಎ. 1% ಬಿ. 9% ಸಿ. 10% ಡಿ. 11 1/9%

**40. 300ಮೀ. ದೂರದಲ್ಲಿನ ಒಬ್ಬ ಕಳ್ಳನನ್ನು ಒಬ್ಬ ಪೋಲಿಸ್ ನೋಡಿದನು. ಅದೇ ಹೊತ್ತಿಗೆ ಕಳ್ಳ ಮತ್ತು ಪೋಲಿಸ್ ಓಡಲು ಪ್ರಾರಂಭಿಸಿದರು, ಪೋಲಿಸ್ 4ಮೀ/ಸೆಕೆಂಡು ವೇಗದಲ್ಲಿ ಮತ್ತು ಕಳ್ಳನು 3 ಮೀ/ಸೆಕೆಂಡು ವೇಗದಲ್ಲಿ ಓಡಿದರೆ, ಎಷ್ಟು ಸಮಯದ ಬಳಿಕ ಪೋಲಿಸ್ ಕಳ್ಳನನ್ನು ಹಿಡಿಯಲು ಸಾಧ್ಯ?**

ಎ. 12 ನಿಮಿಷಗಳು

ಬಿ. 5 ನಿಮಿಷಗಳು

ಸಿ. 9 ನಿಮಿಷಗಳು

ಡಿ. 3 1/3ನಿಮಿಷಗಳು